## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ:756/2012

| | ಪ್ರಾಸಾಃ- | 1 |
|---|---|---|

| | |
|---|---|
| ಹೆಸರು | ಲಿಂಗರಾಜು ಎನ್ |
| ತಂದೆಯ ಹೆಸರು | ಲೇಟ್ ನಿಂಗಯ್ಯ |
| ವಯಸ್ಸು | 42 |
| ಉದ್ಯೋಗ | ಎಎಸ್ಐ, ಕನಕಪುರ ಪುರ ಪೊಲೀಸ್ ಠಾಣೆ |
| ವಿಳಾಸ | ಕನಕಪುರ |

- - - - - - - - - - - - - - - - - - - - - - - - - - - - - -

**ಕಲಂ 299 ದಂಡ ಪ್ರಕ್ರಿಯೆ ಸಂಹಿತೆ ಅಡಿಯಲ್ಲಿ ಸಾಕ್ಷಿ ವಿಚಾರಣೆ**

**ದಿಃ17.05.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ದಿ.12.12.2022 ರಿಂದ ಇಲ್ಲಿಯವರೆಗೂ ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದ 2ನೇ ಆರೋಪಿತನ ವಿರುದ್ದ ಉದ್ಘೋಷಣಯನ್ನು ಮಾಡಬೇಕೆಂದು, ನ್ಯಾಯಾಲಯದಿಂದ ನಮಗೆ ವಾರೆಂಟ್ ಬಂದಿರುತ್ತದೆ.

ದಿನಾಂಕ.15.03.2023 ರಂದು ಮಧ್ಯಾಹ್ನ 1:00 ರಿಂದ 2:00 ಗಂಟೆ ಸಮಯದಲ್ಲಿ 2ನೇ ಆರೋಪಿತನಾದ ಸೈಯದ್ ಉಮಾರ್ ಬಿನ್ ಸೈಯದ್ ಅಮೀದ್ ರವರಿಗೆ ಸಂಬಂಧಿಸಿದಂತೆ ಟಿ ನರಸಿಪುರ ಟೌನಿನ ಇಂದ್ರಕಾಲೋನಿಯಲ್ಲಿ 2ನೇ ಆರೋಪಿತನು ವಾಸವಿದ್ದ ಸ್ಥಳದಲ್ಲಿ ಪಂಚರಾದ ಲಾಲು ಮತ್ತು ಹೈದರಅಲಿ ರವರ ಸಮಕ್ಷಮ ಉದ್ಘೋಷಣೆ ಮಾಡಿರುತ್ತೇನೆ.

ಉದ್ಘೋಷಣ ವಾರೆಂಟ್ ಗ್ರಾಮದ ಮುಖ್ಯ ಬೀದಿಗಳಲ್ಲಿ ಟಾಂಟಾಂ ಮಾಡಿಸಿ ಉದ್ಘೋಷಣೆ ಪ್ರತಿಯನ್ನು ಆರೋಪಿಯ ಮನೆ ಬಾಗಿಲಿಗೆ ಹಾಗೂ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಿರುತ್ತೇನೆ. ಆ ಬಗ್ಗೆ ಸ್ಥಳದಲ್ಲಿ ಪಂಚನಾಮವನ್ನು ಬರೆದಿರುತ್ತೇನೆ. ನಂತರ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸದರಿ ಉದ್ಘೋಷಣೆ ಪಂಚನಾಮೆ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮರುವಿಚಾರಣೆ ಃಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಓ ಹೇ ಕೇ ಸ ಇ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.